ಮಂಡ್ಯದಲ್ಲಿ ಸ್ಥಾಪಿಸಲುದ್ದೇಶಿಸಿರುವ ಕೋಲ್‌ಬೇಸ್ಡ್ ವಿದ್ಯುತ್ ಘಟಕ.

1642(1802)

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಲ್ಲಿ 'ಯುರೋ ಇಂಡಿಯಾ ಸಂಸ್ಥೆ'ಯವರು ಕೋಲ್ ಬೇಸ್ಡ್ ವಿದ್ಯುತ್ ಘಟಕ (220 ಎಂಡಬ್ಲ್ಯೂ)ವನ್ನು ಸ್ಥಾಪಿಸಲು ಸರಕಾರದವರು ಅನುಮತಿ ನೀಡಿರುವುದು ನಿಜವೇ: ಹಾಗಿದ್ದಲ್ಲಿ ವಿವರಗಳೇನು:

ಆ) ಬಿಡ್ ರೂಟ್ ಬಾರ್ಜ್ ಮೌಂಟೆಡ್ ಲಿಕ್ವಿಡ್ ಫ್ಯೂಯೆಲ್ ಬೇಸ್ಡ್ ಪ್ರಾಜೆಕ್ಟ್‌ನ್ನು ಕೋಲ್ ಹಾಗೂ ಲ್ಯಾಂಡ್ ಬೇಸ್ಡ್ ಪ್ರಾಜೆಕ್ಟ್‌ಗೆ ಬದಲಾವಣೆ ಮಾಡಿಕೊಳ್ಳುವ ಅನುಮತಿಯನ್ನು ಯಾವ ಆಕ್ಟ್‌ನ ವ್ಯಾಪ್ತಿಯಲ್ಲಿ ನೀಡಲಾಯಿತು : ಈ ಕ್ರಮವು ಕಾನೂನು ನಿಯಮಗಳಿಗನ್ವಯವಾಗಿದೆಯೇ?

ಶ್ರೀ ವೀರಕುಮಾರ್ ಆ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಯೂರೋ ಇಂಡಿಯಾ ಸಂಸ್ಥೆಯವರಿಗೆ ಮಂಡ್ಯದ ಹತ್ತಿರ 220 ಮೆ.ವ್ಯಾ. ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಯೋಜನೆ ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿದೆ. ಈ ಯೋಜನೆಯನ್ನು ಮುಂದುವರಿದ ಬಿಡ್ ರೂಟ್ ಯೋಜನೆ ಎಂದು ಪರಿಗಣಿಸಲಾಗಿದೆ.

ಆ) ಯೂರೋ ಇಂಡಿಯಾ ಸಂಸ್ಥೆಯವರು ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದಿಸಲು ಮುಂದೆ ಬಂದಿದ್ದಾರೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಉತ್ಪಾದಿಸಲು ಮುಂದೆ ಬಂದಿರುವುದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ: ಸರ್ಕಾರಕ್ಕೆ ಅನುಕೂಲಕರವಾಗಿರುವುದರಿಂದ ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದಿಸಲು ಸ್ವತಂತ್ರ ಉತ್ಪಾದಕರು ಮುಂದೆ ಬರುವ ಗ್ಯಾರಂಟಿ ಇಲ್ಲದೇ ಇರುವುದರಿಂದ ಸರ್ಕಾರವು ಯಾರೋ ಇಂಡಿಯಾದವರಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಿದೆ.

ಉಡುಪಿ ತಾಲ್ಲೂಕಿನಲ್ಲಿನ ಕಿಂಡಿ ಅಣೆಕಟ್ಟುಗಳು.

1643(1801)